ಅವನಲ್ಲಿಲ್ಲ. ಅರಿವಿಗೊಗ್ಗುತ್ತಿಲ್ಲ. ಕೆಲವೊಮ್ಮೆ ಎಚ್ಚರ ಮತ್ತು ನಿದ್ರೆಗಳ ವ್ಯತ್ಯಾಸ ಕೂಡ ತಪ್ಪಿರುತ್ತಾನೆ. ಕತೆಯೂ ಹಕೀಕತೂ ಒಂದೇ ಅಂದುಕೊಳ್ಳುತ್ತಾನೆ. ಕನಸೆಂಬ ಕನಸಿಗೂ, ಅದರ ಹೊರಗಿನದಕ್ಕೂ ಇರುವ ನಿಖರ ಫರಕು ಅವನಿಗೆ ನಿಜಕ್ಕೂ ಅರ್ಥವಾಗುವುದಿಲ್ಲ! ಪ್ರಾಪಂಚಿಕ ವಾಸ್ತವದೊಳಗೆ ಎಚ್ಚೆತ್ತಿರುವ ಮನಸ್ಸು, ನಿದ್ರೆಯೊಳಗಿನ ತನ್ನದೇ ವ್ಯಾಪಾರವನ್ನು ಕನಸೆಂದು ಬಗೆವುದಾದರೆ, ಅದೇ ಸುಷುಪ್ತಿಯೊಳಗಿರುವಂಥದ್ದು ವಾಸ್ತವಿಕ ಹಗಲನ್ನೇ ಕನಸೆಂದೇಕೆ ಬಗೆಯಬಾರದೆಂಬ ವಿಕ್ಷಿಪ್ತ ದ್ವಂದ್ವ ಅವನನ್ನು ಕಾಡುವುದಿದೆ. ಇದು 'ಅದಾಗ'ಬಹುದಾದರೆ, ಅದೇ ಕೊರೊಲರಿಯ ಮೇರೆಯಲ್ಲಿ ಅದೂ 'ಇದಾಗ'ಬಹುದಲ್ಲವೆ... ಅಂತೆಂಬೆಲ್ಲ ವಿರೋಧಾಭಾಸಗಳು ಅವನ ತಲೆಚಿಟ್ಟುಗೈಯುತ್ತವೆ. ಕತ್ತಲೆಂಬ ಕತ್ತಲಾದರೂ ಭೂಮಿಯು ತಂತಾನೇ ತನ್ನ ಮೇಲೆ ಚೆಲ್ಲಿಕೊಳ್ಳುವ ನೆರಳಷ್ಟೇ ಅನಿಸುತ್ತದೆ. ಹಾಗೇ, ಹಗಲೆಂಬ ಹಗಲೂ ಅದೇ ಭೂಮಿಯು ತನ್ನಂತಾನು ಒಡ್ಡಿಕೊಳ್ಳುವ ಬೆಳಕೇ ತಾನೆ? ಹಾಗಾದರೆ, ಹಗಲುಕತ್ತಲು ಅಂತೆಂಬುದರ ಹೊತ್ತುಗೊತ್ತಾದರೂ ಏನು? ದಿಟದ ಅರ್ಥವೇನು? ಬದುಕಿನ ಪ್ಲಸ್ಸುಗಳೆಲ್ಲ ಆಯಾ ಪ್ಲಸ್ಸಿನಷ್ಟೇ ಮೈನಸ್ಸೂ ಹೌದಷ್ಟೆ ಎಂದು ಸದಾ ಅನ್ನಿಸಿಬರುತ್ತವೆ. ಇನ್ನು, ಬದುಕಿನಾಚೆಯಿರಬಲ್ಲ ಸಾವೆಂದರೇನು? ಅದೂ ಇನ್ನೊಂದು ಬದುಕೇ ಹೌದಷ್ಟೆ... ಅಂದುಕೊಳ್ಳುತ್ತಾನೆ. ಇವಕ್ಕೆ ತಳುಕಿಟ್ಟುಕೊಂಡೇ, 'ಇರುವುದು' ಅಂದರೇನು... ಅಂತೆಂಬ ತನಿಖೆಯಲ್ಲಿ ಮುಳುಗುತ್ತಾನೆ. ಹಾಗಾದರೆ 'ಇಲ್ಲದಿರುವುದು' ಅಂತನ್ನುವುದೇನು... ಯೋಚನೆಯಾಗುತ್ತದೆ. 'ಇದೆ' ಮತ್ತು 'ಇಲ್ಲ' ಇವುಗಳ ಅಂತರದಲ್ಲಿ ತಾನಿದ್ದೇನೆಯೆ ಅನಿಸುತ್ತದೆ. ಈ ಜಗತ್ತಿನಲ್ಲಿನ ತನ್ನಿರುವಿಕೆಯಿರಲಿ, ಖುದ್ದು ಜಗತ್ತಿರುವುದೂ ಒಂದು ಭ್ರಮೆಯೇ ಅಂತನಿಸುತ್ತದೆ. ಇತ್ತೀಚೆಗೆ, ಯಾರೋ ವಾಟ್ಸ್ಆ್ಯಪಿನಲ್ಲಿ ಕಳಿಸಿದ, ಋಗ್ವೇದದ 'ನಾಸದೀಯಸೂಕ್ತ'ವೆಂಬುದರ ತಿಳಿ ತಿಳಿ ಅನುವಾದವನ್ನು ತಿಳಿದ ಮೇಲಂತೂ, ಮನಸ್ಸು ಮತ್ತೂ ಡೋಲಾಯಿಸಿದೆ. ಎಂತಲೇ, ನಿನ್ನೆ ರಾತ್ರಿ ನಿದ್ದೆಗಿಳಿದ ಅರೆಮುಕ್ಕಾಲು ತಾಸಿಗೆಲ್ಲ ಎಚ್ಚರವುಂಟಾಗಿ, ಆ ಎಚ್ಚರವೂ ಇನ್ನೊಂದು ನಮೂನೆ ನಿದ್ರೆಯೇ ಅಂತನಿಸುತ್ತಿರುವ ನಡುವೆ ಅವನಿಗೆ, 'ಏನೂ ಇಲ್ಲದಲ್ಲಿಗೆ ಹೊರಟಿದ್ದೇನೆ... ಅಲ್ಲಿ ಇಲ್ಲವೆಂಬುದೂ ಇಲ್ಲ...' ಎಂಬೊಂದು ಸಾಲು ಹೊಳೆಯುತ್ತದೆ. 'ಇಲ್ಲದಲ್ಲಿಗೆ' ಅಂದರೇನು ಅಂತ ಯೋಚಿಸಿದ್ದೇ ಅವನಿಗೆ ಮೈಯೆಲ್ಲ ಝುಮ್ಮೆನ್ನಿಸಿದೆ. ಅದೇನು ಪುಳಪುಳನೆ ಪುಳಕವೇ? ಇಲ್ಲಾ, ಆಪೋಸಿಟ್ಟಾದ ಕಳಕಳನೆ ಕಳವಳವೆ? ತಿಳಿಯುತ್ತಿಲ್ಲ. ಅಲ್ಲೆಂಬ 'ಅಲ್ಲಿ' ಇಲ್ಲವೆಂಬ 'ಇಲ್ಲ'ವೂ ಇಲ್ಲವೇ? ಹೀಗನ್ನುವುದೇನು ಭಾಷೆಯೆ? ನುಡಿಯೆಂಬ ನುಡಿಯನ್ನು ಸುಖಾ ಸುಮ್ಮನೆ ದುಡಿಸಿದ ಚಮತ್ಕಾರವೆ? 'ಅಲ್ಲಿ' ನಿಜಕ್ಕೂ ತನ್ನನ್ನೆಳೆಯುವ ಗುರುತ್ವವಿಲ್ಲವೆ? ಭೂಮಿಯಿಲ್ಲವೆ? ಗಾಳಿಯಿಲ್ಲವೆ? ಆಕಾಶವೆಂಬ ಅಂತರಿಕ್ಷವೂ ಇಲ್ಲವೆ? ಬೆಳಕು? ಕತ್ತಲು? ಛೇ... ಹೀಗಂದರೇನು? ಏನೂ ಇಲ್ಲದಿರುವ ಎಡೆ ಅಂತೊಂದಿದೆಯೆ? ಎಡೆಯೂ ಇಲ್ಲದ ಎಡೆಯಾದರೂ ಇದೆಯೆ? ಮತ್ತು ಹೇಗೆ?

ವಿಚಿತ್ರ ತಾನೇ?

ಹೀಗೆ ಸುಮ್ಸುಮ್ಮನೆ ಹೊಳೆದ ಸಾಲುಗಳನ್ನು, ಲ್ಯಾಪ್‌ಟಾಪಿನಲ್ಲಿ ಕೀಲಿಸಿಕೊಂಡು ಮರಳಿ ಮಲಗುವ ಸುಮಾರಿಗೆ, ರುದ್ರನೀಲ ಥಾಪಸೆಯ ಕಗ್ಗತ್ತಲಿನ 'ಇಹ'ದಲ್ಲಿ ಹನ್ನೆರಡೂ ಹತ್ತರ ಸುಮಾರು. ಹಾಗಾದರೆ, ಏನೂ ಇರದ ಪರದಲ್ಲಿ ಈಗ ಎಷ್ಟು ಹೊತ್ತಿರಬಹುದು... ಅಂತೆಂಬ ಯೋಚನೆಯೊಂದು, ಆಗಲೇ ಮನಸ್ಸು ಜೀಕಿ ಸುಮ್ಮಗಾಯಿತು. ಖುದ್ದು ನಿದ್ದೆಗಿಳಿಯಿತು. ಇವೊತ್ತು ಬೆಳಿಗ್ಗೆ, ಎಂದಿನಂತೆ ಐದಕ್ಕೆಲ್ಲ ಎಚ್ಚೆತ್ತುಕೊಂಡಾಗ, ರುದ್ರನೀಲ ಥಾಪಸೆ ಮೊದಲು